Online Newspaper Clipping Service

ಉದಯವಾಣಿ

Dated, Sunday, 02nd July– 2017 Pg.No.02

ವೈದ್ಯರ ದಿನಾಚರಣೆ ■ ವೈದ್ಯರು ಆತ್ಮವಿಮರ್ಶೆಯ ಮೂಲಕ ಉತ್ತಮ ಸೇವೆ ನೀಡಬೇಕು

# 'ವೈದ್ಯರಿಗೆ ಹಣಗಳಿಕೆಗಿಂತ ಸೇವಾ ಮನೋಭಾವ ಅಗತ್ಯ'

**ಕೋಲಾರ:** ವೈದ್ಯಕೀಯ ಕ್ಷೇತ್ರದಲ್ಲಿ ಹಣ ಗಳಿಕೆಗಿಂತ ಸೇವಾ ಮನೋಭಾವನೆಯಿಂದ ಮುನ್ನಡೆದರೆ ಮಾತ್ರ ವೃತ್ತಿ ಘನತೆ ಕಾಪಾಡಿಕೊಳ್ಳುವುದರೊಂದಿಗೆ ಯಶಸ್ಸು ಕಾಣಲು ಸಾಧ್ಯ ಎಂದು ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದ ಕುಲಪತಿ ಡಾ.ಸಿ.ವಿ.ರಘುವೀರ್ ಅಭಿಪ್ರಾಯಪಟ್ಟರು.

ಶನಿವಾರ ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ನಡೆದ ವೈದ್ಯರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಹಿರಿಯ ವೈದ್ಯೆ ಡಾ.ರಾಜೇಶ್ವರಿಯವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಸೇವಾ ಮನೋಭಾವನೆ ಕಾಣೆಯಾಗಿ ಹಣ ಗಳಿಕೆ ಪ್ರಾಮುಖ್ಯತೆ ಪಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸರಿ -ತಪ್ಪು ಗಳ ಆತ್ಮವಿಮರ್ಶೆಯ ಮೂಲಕ ಆಗಿರುವ ಸೇವೆಗೆ ಆದ್ಯತೆ ನೀಡುವಂತಾಗಬೇಕು ಎಂದು ಕಿವಿಮಾತು ಹೇಳಿದರು.

**ಬಿ.ಸಿ.ರಾಯ್ ಸಾಧನೆ ಅಪಾರ:** ಕೋಲ್ಕತ್ತಾದಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿ ವೈದ್ಯಕೀಯ ಶಿಕ್ಷಣ ಪಡೆದುಕೊಂಡಿರುವ ಡಾ.ಬಿ.ಸಿ.ರಾಯ್, ಸೈಕಲ್‌ನಲ್ಲಿ ರೋಗಿಗಳ ಬಳಿಗೆ ತೆರಳಿ ಆರೈಕೆ ಮಾಡುತ್ತಾ ಮೊಬೈಲ್ ವೈದ್ಯರು ಎಂದೇ ಹೆಸರಾಗಿದ್ದರು. ಅವರ ಸೇವೆಯನ್ನು ಸ್ವತಃ ಬ್ರಿಟಿಷರು ಗುರುತಿಸಿದ್ದರು. ಜನಸಾಮಾನ್ಯರ ಬಗ್ಗೆ ಇದ್ದ ಅವರ ಕಾಳಜಿಯೇ ಮುಂದೆ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಲು ಅವಕಾಶ ಕಲ್ಪಿಸಿತು ಎಂದರು.




**ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ನಡೆದ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ವೈದ್ಯೆ ಡಾ.ರಾಜೇಶ್ವರಿಯವರನ್ನು ಸನ್ಮಾನಿಸಲಾಯಿತು.**

ಬಿ.ಸಿ.ರಾಯ್ ಅವರ ಜನ್ಮದಿನವನ್ನೇ ವೈದ್ಯರ ದಿನ ಎಂದು ಆಚರಿಸಲಾಗುತ್ತಿದೆ. ಪ್ರತಿಯೊಬ್ಬರು ಅವರ ಆದರ್ಶ ತತ್ವಗಳನ್ನು ಮೈಗೂಡಿಸಿಕೊಂಡು ಸೇವೆ ಮುಂದುವರಿಸಿದರೆ ಸಮಾಜದಲ್ಲಿ ಉತ್ತಮ ವೈದ್ಯರಾಗಿ ಹೆಸರು ಗಳಿಸಬಹುದು ಎಂದು ಹೇಳಿದರು.

ಇಟಿಸಿಎಂ ಟ್ರಸ್ಟ್ ದೇಶದಲ್ಲಿ 35 ಶಾಖೆಗಳನ್ನು ಹೊಂದಿದ್ದು, ಜನರಿಗೆ ಉತ್ತಮ ಸೇವೆ ಮಾಡುತ್ತಿದೆ. ದಾನಿಗಳ ಸಹಕಾರದಿಂದ ಟ್ರಸ್ಟ್ ಉತ್ತಮ ಬೆಳವಣಿಗೆಯಾಗುತ್ತಿದೆ. ಸಂಕಷ್ಟದ ಸ್ಥಿತಿಯಲ್ಲಿ ರಾಜೇಶ್ವರಿಯವರು ಸಾಧನೆ ಮಾಡಿದ್ದಾರೆ. ಅವರು ಸದಾ ಜನ ಸೇವೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಮನೆಮಾತಾಗಿದ್ದಾರೆ ಎಂದು ತಿಳಿಸಿದರು.

**ಹೊಸ ಸಂಶೋಧನೆ ಅಗತ್ಯ:** ರೇಡಿಯಾಲಾಜಿಸ್ಟ್ ಡಾ.ರಾಜೇಶ್ವರಿ ಮಾತನಾಡಿ, ಸಮಾಜದಲ್ಲಾಗುತ್ತಿರುವ ಏರುಪೇರುಗಳಿಂದ ತೀವ್ರ ತರವಾದ ಕಾಯಿಲೆಗಳು ಪತ್ತೆಯಾಗುತ್ತಿವೆ. ಅವುಗಳನ್ನು ನಿಯಂತ್ರಿಸಲು ಹೊಸ ಹೊಸ ಸಂಶೋಧನೆಗಳು ನಡೆಯಬೇಕಾದ ಅಗತ್ಯವಿದ್ದು, ಯುವ ವೈದ್ಯರು ಇದರಲ್ಲಿ ತೊಡಗಿಸಿಕೊಳ್ಳಲು ಮುಂದಾಗಬೇಕು ಎಂದರು.

ನಾನು ಪ್ರಾಥಮಿಕ ಹಂತದಿಂದ ಸರ್ಕಾರಿ ಶಾಲಾ ಕಾಲೇಜಿನಲ್ಲೇ ಶಿಕ್ಷಣ ಪಡೆದುಕೊಂಡು ಮೊದಲ ಹಂತದಲ್ಲಿಯೇ ಸರ್ಕಾರಿ ಸಂಸ್ಥೆಯಲ್ಲಿ ವೈದ್ಯೆಯಾಗಿ ಕಾರ್ಯನಿರ್ವಹಿಸಿದೆ. ಆನಂತರ ಕೇಂದ್ರ ಸರ್ಕಾರದಲ್ಲೂ ಅವಕಾಶ ಸಿಕ್ಕಿದ ನಂತರ ಸ್ವಯಂ ನಿವೃತ್ತಿಯಾಗಿ ಕೋಲಾರದಲ್ಲೇ ಉಳಿಕೊಂಡು ಜನ ಸೇವೆಯನ್ನು ಮುಂದುವರೆಸಿದ್ದೇನೆ. ಈ ನನ್ನ ಸಾಧನೆಯ ಹಿಂದೆ ಕುಟುಂಬದ ಸದಸ್ಯರ ಸಹಕಾರ ಅಡಗಿದೆ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ವೈದ್ಯೆ ಡಾ. ರಾಜೇಶ್ವರಿಯವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ದೇವರಾಜ ಅರಸು ಶಿಕ್ಷಣ ಸಂಸ್ಥೆಯ ನಿರ್ದೇಶಕ ಎಲ್.ರಾಜೇಂದ್ರ, ಪ್ರಾಂಶುಪಾಲ ಡಾ.ಎಂ.ಎಲ್.ಹರೇಂದ್ರಕುಮಾರ್, ಉಪಾಧ್ಯಕ್ಷ ಡಾ.ರವೀಶ್, ಜಂಟಿ ನಿರ್ದೇಶಕ ಡಾ.ದಿನೇಶ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

### ವೈದ್ಯರ ದಿನಾಚರಣೆಯಲ್ಲಿ ಕುಲಪತಿ ಡಾ. ರಘುವೀರ್ ಅನಿಸಿಕೆ

# ಸೇವಾಭಾವದ ವೃತ್ತಿ ಬದುಕು ಶ್ರೇಷ್ಠ

ಪ್ರಜಾವಾಣಿ ವಾರ್ತೆ

ಕೋಲಾರ: 'ವೈದ್ಯರು ಸೇವಾ ಮನೋಭಾವದಿಂದ ವೃತ್ತಿ ಮುಂದುವರಿಸಿದರೆ ವೃತ್ತಿ ಬದುಕಿನಲ್ಲಿ ಯಶಸ್ಸು ಸಾಧ್ಯ' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿ ಡಾ.ಸಿ.ವಿ. ರಘುವೀರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ನಡೆದ ವೈದ್ಯರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ವೈದ್ಯಕೀಯ ಕ್ಷೇತ್ರದಲ್ಲಿ ಸೇವಾ ಮನೋಭಾವ ಕಾಣೆಯಾಗಿ ಹಣ ಗಳಿಕೆಯೆ ಪ್ರಾಮುಖ್ಯತೆ ಪಡೆದಿರುವುದು ಆತಂಕಕಾರಿ ಬೆಳವಣಿಗೆ. ವೈದ್ಯರು ಸರಿ - ತಪ್ಪುಗಳ ಆತ್ಮವಿಮರ್ಶೆ ಮೂಲಕ ಸೇವೆಗೆ ಆದ್ಯತೆ ನೀಡಬೇಕು' ಎಂದು ಕಿವಿಮಾತು ಹೇಳಿದರು.

'ಕೋಲ್ಕತ್ತದ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿ ವೈದ್ಯಕೀಯ ಶಿಕ್ಷಣ ಪಡೆದ ಡಾ.ಬಿ.ಸಿ.ರಾಯ್ ಅವರು ಸೈಕಲ್‌ನಲ್ಲಿ ರೋಗಿಗಳ ಬಳಿಗೆ ತೆರಳಿ ಆರೈಕೆ ಮಾಡುತ್ತಾ ಮೊಬೈಲ್ ವೈದ್ಯ ಎಂದೇ ಹೆಸರಾಗಿದ್ದರು. ಅವರ ಸೇವೆಯನ್ನು ಬ್ರಿಟೀಷರು ಸಹ ಗುರುತಿಸಿದ್ದರು. ಜನಸಾಮಾನ್ಯರ ಬಗ್ಗೆ ಅವರಿದ್ದ ಕಾಳಜಿಯು ಮುಂದೆ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಲು ಅವಕಾಶ ಕಲ್ಪಿಸಿತು' ಎಂದು ವಿವರಿಸಿದರು.




ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ವೈದ್ಯೆ ಡಾ.ರಾಜೇಶ್ವರಿ ಅವರನ್ನು ಸನ್ಮಾನಿಸಲಾಯಿತು

'ರಾಯ್ ಅವರ ಜನ್ಮದಿನವನ್ನು ವೈದ್ಯರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. ವೈದ್ಯಕೀಯ ಸಿಬ್ಬಂದಿ ಅವರ ಆದರ್ಶ ಮೈಗೂಡಿಸಿಕೊಂಡು ಸೇವೆ ಮುಂದುವರಿಸಿದರೆ ಸಮಾಜದಲ್ಲಿ ಹೆಸರು ಗಳಿಸಬಹುದು. ಇಟಿಸಿಎಂ ಟ್ರಸ್ಟ್ ದೇಶದಲ್ಲಿ 35 ಶಾಖೆಗಳನ್ನು ಹೊಂದಿದ್ದು, ಜನರಿಗೆ ಉತ್ತಮ ವೈದ್ಯಕೀಯ ಸೇವೆ ನೀಡುತ್ತಿದೆ. ದಾನಿಗಳ ಸಹಕಾರದಿಂದ ಟ್ರಸ್ಟ್ ಅಭಿವೃದ್ಧಿ ಪಥದಲ್ಲಿ ಸಾಗಿದೆ' ಎಂದು ಹೇಳಿದರು.

**ಸಂಶೋಧನೆ ನಡೆಯಬೇಕು:** ಡಾ. ರಾಜೇಶ್ವರಿ ಮಾತನಾಡಿ, 'ಸಮಾಜದಲ್ಲಿ ಆಗುತ್ತಿರುವ ಏರುಪೇರುಗಳಿಂದ ಜನರಲ್ಲಿ ಗಂಭೀರ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಕಾಯಿಲೆಗಳ ನಿಯಂತ್ರಣಕ್ಕೆ ಹೊಸ ಸಂಶೋಧನೆಗಳು ನಡೆಯಬೇಕು. ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಯುವ ವೈದ್ಯರು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಡಾ. ರಾಜೇಶ್ವರಿ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ದೇವರಾಜ ಅರಸು ಶಿಕ್ಷಣ ಸಂಸ್ಥೆ ನಿರ್ದೇಶಕ ಎಲ್.ರಾಜೇಂದ್ರ, ಉಪಾಧ್ಯಕ್ಷ ಡಾ. ರವೀಶ್, ಜಂಟಿ ನಿರ್ದೇಶಕ ಡಾ. ದಿನೇಶ್, ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಎಲ್. ಹರೇಂದ್ರ ಕುಮಾರ್ ಪಾಲ್ಗೊಂಡಿದ್ದರು.

**ಮುಖ್ಯಾಂಶಗಳು**

- ವೈದ್ಯರ ದಿನವಾಗಿ ಡಾ. ರಾಯ್ ಜನ್ಮದಿನಾಚರಣೆ
- ವ್ಯತಿರಿಕ್ತ ಹವಾಮಾನದಿಂದ ಆರೋಗ್ಯಕ್ಕೆ ಹಾನಿ
- ಕಾಯಿಲೆ ನಿಯಂತ್ರಣಕ್ಕೆ ಸಂಶೋಧನೆ ಅಗತ್ಯ

ಸಮಾಜದ ಭಾಗವಾಗಿ ಬೆಳೆಯುವ ವೈದ್ಯರು ತಮ್ಮ ಸುತ್ತಲಿನ ಜನರ ಸಮಸ್ಯೆಗೆ ಸ್ಪಂದಿಸಿ ಸೇವಾಮನೋಭಾವದಿಂದ ಕರ್ತವ್ಯ ನಿರ್ವಹಿಸುವುದು ಸೂಕ್ತ

**ಡಾ. ಸಿ.ವಿ. ರಘುವೀರ್**
ಕುಲಪತಿ, ದೇವರಾಜ ಅರಸು ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ

ವಿಜಯ ಕರ್ನಾಟಕ



# ವೈದ್ಯ ಕ್ಷೇತ್ರದಲ್ಲಿ ಮರೆಯಾಗುತ್ತಿರುವ ಸೇವಾ ಮನೋಭಾವ ಆತಂಕಕಾರಿ

**ಕೋಲಾರ:** ವೈದ್ಯಕೀಯ ಕ್ಷೇತ್ರದಲ್ಲಿ ಸೇವಾ ಮನೋಭಾವ ಕಾಣೆಯಾಗಿ ಹಣ ಗಳಿಕೆ ಪ್ರಾಮುಖ್ಯತೆ ಪಡೆಯುತ್ತಿ ರುವುದು ಆತಂಕಕಾರಿ ಬೆಳವಣಿಗೆ ಯಾಗಿದೆ ಎಂದು ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದ ಕುಲಪತಿ ಡಾ.ಸಿ.ವಿ. ರಘುವೀರ್ ಅಭಿಪ್ರಾ ಯಪಟ್ಟರು.

ನಗರ ಹೊರವಲಯದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಶನಿ ವಾರ ನಡೆದ ವೈದ್ಯರ ದಿನಾ ಚರಣೆಯನ್ನು ಉದ್ಘಾಟಿಸಿ ಮಾತ ನಾಡಿದರು.

ವೃತ್ತಿಯಲ್ಲಿಸೇವಾ ಮಾನೋ ಭಾವದಿಂದ ಮುಂದುವರಿ ದರೆ ಮಾತ್ರ ಯಶಸ್ಸು ಕಾಣಲು ಸಾಧ್ಯ. ಸರಿ-ತಪ್ಪುಗಳ ಆತ್ಮವಿ ಮರ್ಶೆಯ ಮೂಲಕ ಆಗಿರುವ ಸೇವೆಗೆ ಆದ್ಯತೆ ನೀಡುವಂ ತಾಗಬೇಕು ಎಂದು ಸಲಹೆ ನೀಡಿದರು.

ಕಲ್ಕತ್ತಾದಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿ ವೈದ್ಯಕೀಯ ಶಿಕ್ಷಣ ಪಡೆದುಕೊಂಡಿರುವ ಡಾ.ಬಿ.ಸಿ.ರಾಯ್, ಸೈಕಲ್‌ನಲ್ಲಿ ರೋಗಿಗಳ ಬಳಿಗೆ ತೆರಳಿ ಆರೈಕೆ ಮಾಡುತ್ತಾ ಮೊಬೈಲ್ ವೈದ್ಯರು ಎಂದು ಹೆಸರಾಗಿದ್ದರು.

ಇಟಿಸಿಎಂ ಟ್ರಸ್ಟ್ ದೇಶದಲ್ಲಿ 35 ಶಾಖೆಗಳನ್ನು ಹೊಂದಿದ್ದು, ಜನರಿಗೆ ಉತ್ತಮ ಸೇವೆ ಮಾಡುತ್ತಿದೆ. ದಾನಿಗಳ ಸಹಕಾರದಿಂದ ಟ್ರಸ್ಟ್ ಉತ್ತಮ ಬೆಳವಣಿಗೆ ಯಾಗುತ್ತಿದೆ. ಸಂಕಷ್ಟದ ಸ್ಥಿತಿಯಲ್ಲಿ ಸರಕಾರಿ ಶಾಲಾ ಕಾಲೇಜಿನಲ್ಲೇ ಶಿಕ್ಷಣ ಪಡೆದುಕೊಂಡು ಮೊದಲ ಹಂತ ದಲ್ಲಿಯೇ ಸರಕಾರಿ ಸಂಸ್ಥೆಯಲ್ಲಿ ವೈದ್ಯೆ ಯಾಗಿ ಕಾರ್ಯನಿರ್ವಹಿಸಿದೆ. ಅನಂತರ ಕೇಂದ್ರ ಸರಕಾರದಲ್ಲೂ ಅವಕಾಶ ಸಿಕ್ಕಿದ ನಂತರ ಸ್ವಯಂ ನಿವೃತ್ತಿಯಾಗಿ ಕೋಲಾರದಲ್ಲೇ ಉಳಿಕೊಂಡು ಜನ ಸೇವೆಯನ್ನು ಮುಂದುವರಿಸಿದ್ದೇನೆ. ಈ ನನ್ನ ಸಾಧನೆಯ ಹಿಂದೆ ಕುಟುಂಬದ ಸದಸ್ಯರ ಸಹಕಾರ ಅಡಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.




ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ನಡೆದ ವೈದ್ಯರ ದಿನಾಚರಣೆಯಲ್ಲಿ ವೈದ್ಯೆ ಡಾ.ರಾಜೇಶ್ವರಿಯವರನ್ನು ಸನ್ಮಾನಿಸಲಾಯಿತು.

> ವೈದ್ಯರ ದಿನಾಚರಣೆಯಲ್ಲಿ ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದ ಕುಲಪತಿ ಅಭಿಪ್ರಾಯ

ರಾಜೇಶ್ವರಿಯವರು ಸಾಧನೆ ಮಾಡಿದ್ದಾರೆ. ಅವರು ಸದಾ ಜನ ಸೇವೆ ಯಲ್ಲಿ ತೊಡಗಿಸಿ ಕೊಂಡಿರುವುದರಿಂದ ಮನೆ ಮಾತಾ ಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ರೇಡಿಯಾಲಾಜಿಸ್ಟ್ ಡಾ.ರಾಜೇಶ್ವರಿ ಮಾತನಾಡಿ, ಸಮಾಜದಲ್ಲಾಗುತ್ತಿರುವ ಏರುಪೇರುಗಳಿಂದ ತೀವ್ರ ತರವಾದ ಕಾಯಿಲೆಗಳು ಪತ್ತೆಯಾಗುತ್ತಿವೆ. ಅವುಗಳನ್ನು ನಿಯಂತ್ರಿಸಲು ಹೊಸ ಹೊಸ ಸಂಶೋಧನೆಗಳು ನಡೆಯಬೇಕಾದ ಅಗತ್ಯವಿದ್ದು, ಯುವ ವೈದ್ಯರು ಇದರಲ್ಲಿ ತೊಡಗಿಸಿಕೊಳ್ಳಲು ಮುಂದಾಗಬೇಕು ಎಂದರು.

ನಾನು ಪ್ರಾಥಮಿಕ ಹಂತದಿಂದ ಸರಕಾರಿ ಶಾಲಾ ಕಾಲೇಜಿನಲ್ಲೇ ಶಿಕ್ಷಣ ಪಡೆದುಕೊಂಡು ಮೊದಲ ಹಂತ ದಲ್ಲಿಯೇ ಸರಕಾರಿ ಸಂಸ್ಥೆಯಲ್ಲಿ ವೈದ್ಯೆ ಯಾಗಿ ಕಾರ್ಯನಿರ್ವಹಿಸಿದೆ. ಅನಂತರ ಕೇಂದ್ರ ಸರಕಾರದಲ್ಲೂ ಅವಕಾಶ ಸಿಕ್ಕಿದ ನಂತರ ಸ್ವಯಂ ನಿವೃತ್ತಿಯಾಗಿ ಕೋಲಾರದಲ್ಲೇ ಉಳಿಕೊಂಡು ಜನ ಸೇವೆಯನ್ನು ಮುಂದುವರಿಸಿದ್ದೇನೆ. ಈ ನನ್ನ ಸಾಧನೆಯ ಹಿಂದೆ ಕುಟುಂಬದ ಸದಸ್ಯರ ಸಹಕಾರ ಅಡಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.ಇದೇ ಸಂದರ್ಭದಲ್ಲಿ ಹಿರಿಯ ವೈದ್ಯೆ ಡಾ.ರಾಜೇಶ್ವರಿಯವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ನಿರ್ದೇಶಕ ಎಲ್.ರಾಜೇಂದ್ರ, ಪ್ರಾಂಶುಪಾಲ ಡಾ.ಎಂ.ಎಲ್.ಹರೇಂದ್ರ ಕುಮಾರ್, ಉಪಾಧ್ಯಕ್ಷ ಡಾ.ರವೀಶ್, ಜಂಟಿ ನಿರ್ದೇಶಕ ಡಾ.ದಿನೇಶ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ದುರಾಸೆಗೆ ಪ್ರಕೃತಿ ವಿನಾಶ: ಶಾಸಕ

**ಬಂಗಾರಪೇಟೆ:** ಮನುಷ್ಯನ ದುರಾಸೆಗೆ ಪ್ರಕೃತಿ ವಿನಾಶದತ್ತ ಸಾಗಿದ್ದು, ಹೀಗೆ ಮುಂದು ವರಿದರೆ ಮುಂದೆ ಗಂಡಾಂತರ ಕಟ್ಟಿಟ್ಟ ಬುತ್ತಿ ಎಂದು ಶಾಸಕ ಎಸ್.ಎನ್.ನಾರಾಯಣಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಪುರಸಭೆ ಮತ್ತು ಅರಣ್ಯ ಇಲಾಖೆ ಸಹಯೋಗದಲ್ಲಿ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿ, ನಮ್ಮ ಪೂರ್ವಿಕರು ಹೇರಳವಾಗಿ ಮರ ಗಿಡಗಳನ್ನು ನೆಟ್ಟು ಗಿಡಗಳನ್ನು ಪೋಷಿಸುವ ಕೆಲಸ ಮಾಡಬೇಕಿದೆ. ಕಾಲ ಬದಲಾದಂತೆ ಅದೇ ಮರಗಿಡಗಳನ್ನು ಮನುಷ್ಯನ ಸ್ವಾರ್ಥಕ್ಕಾಗಿ ಬಲಿ ಕೊಡಲಾಗುತ್ತಿದೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗಿ ಅದು ನೇರವಾಗಿ ನಮ್ಮ ಮೇಲೆ ಪರಿಣಾಮ ಬೀರುತ್ತಿದ್ದರೂ ಸಹ ಜೀವ ಸಂಕುಲದ ಜೀವನಾ ಧಾರ ವಾಗಿರುವ ಸಸ್ಯ ಸಂಪತ್ತನ್ನು ರಕ್ಷಿಸದಿದ್ದರೆ, ಮುಂದೆ ಅದರ ದುಷ್ಪರಿಣಾಮ ಎದುರಿಸಬೇಕಾದಿತು ಎಂದರು.

ತಾಪಂ ಅಧ್ಯಕ್ಷೆ ಭಾಗ್ಯಲಕ್ಷ್ಮಿ ಮಾತನಾಡಿ, ಹಿರಿಯರು ನಮಗೆ ಉಡುಗೊರೆ ನೀಡಿರುವ ನಿರ್ಮಲ ಪರಿಸರವನ್ನು ರಕ್ಷಿಸುವಲ್ಲಿ ನಾನು ಎಡವಿದ್ದೇವೆ.ಮತ್ತೆ ಗತ ವೈಭವವನ್ನು ಕಾಣಬೇಕಾದರೆ ಎಲ್ಲರೂ ಪರಿಸರ ರಕ್ಷಣೆಮುಂದಾಗ ಬೇಕು ಎಂದು ಹೇಳಿದರು.ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ ಬಾಲಕೃಷ್ಣ, ಪುರಸಭೆ ಸದಸ್ಯ ವೆಂಕಟೇಶಗೌಡ, ಮುಖಂಡರಾದ ಪಾರ್ಥಸಾರಥಿ,ವೈ.ಇ.ಶ್ರೀನಿವಾಸ್,ಹುಲಿಬೆಲೆ ಸುರೇಶ್,ಮಂಜುಳಾ ಹಾಜರಿದ್ದರು.

THE HINDU



# Over 70,000 eligible for NEET counselling

TANU KULKARNI
BENGALURU

A little over 70,000 medical and dental course aspirants who wrote the National Eligibility-cum -Entrance Test (NEET) in the State are eligible for the counselling process for allotment of seats.

Those who wish to study medicine will face stiff competition as there are only 8,595 medical seats in the 58 colleges across Karnataka.

This includes the deemed universities seats for which counselling will be conducted by the Directorate General of Health Services.

The number of dental seats is yet to be finalised by the State government.

As many as 6.11 lakh candidates, across the country, who took the exam are eligible to apply for seats.

CONTINUED ON ▸ PAGE 5

THE HINDU



# NEET: Over 70,000 eligible for counselling

CONTINUED FROM PAGE 1

Only domicile students are eligible for government and government-quota seats, while candidates from other parts of the country are likely to apply for seats under the institutional quota as well as NRI and management quota seats in private colleges.

Officials said they would also have to segregate this list into different categories.

"This list of around 70,000 candidates refers to those who have taken the exam at centres in the State. We have to categorise it into domicile students and non-domicile students," a source said.

> We have to categorise it into domicile students and non-domicile students.
>
> OFFICIAL

Officials of the Medical Education Department, who procured the list from the Central Board of Secondary Education, submitted it to the Karnataka Examinations Authority (KEA) on Saturday.

After calling for applications next week from all candidates, the KEA will publish a merit list.

This year, the State government has also decided to ensure that 30% of the institutional quota is allotted to students from Karnataka so that students from the State get preference.